ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-EXAM0 ECS 3/30/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು – 560001
ದಿನಾಂಕ: 26/09/2025

**ಅಧಿಕೃತ ಜ್ಞಾಪನ**

ವಿಷಯ: 2025-26 ನೇ ಶೈಕ್ಷಣಿಕ ಸಾಲಿನಿಂದ 1 ಮತ್ತು 2 ನೇ ಸೆಮಿಸ್ಟರ್ ಗಳಲ್ಲಿ ಪರಿಷ್ಕೃತ C-25 ಪಠ್ಯಕ್ರಮಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಹಾಜರಾತಿ ಹಾಗೂ ಮುಂದಿನ ಸೆಮಿಸ್ಟರ್ ಗೆ ಪ್ರವೇಶ ನೀಡುವಲ್ಲಿ ಸ್ಪಷ್ಟೀಕರಣ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಇಡಿ 79 ಡಿಟಿಇ 2025, ದಿನಾಂಕ:27.06.2025

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Regulations of Diploma and Post Diploma Programme – Curriculum 2025 (C-25) ನಿಯಮಾವಳಿಗಳ ಕಂಡಿಕೆ (6.3) Ineligibility due to Insufficient Attendance ಮತ್ತು ಕಂಡಿಕೆ(12) Promotion Eligibility Criteria ಕುರಿತು ಈ ಕೆಳಕಂಡಂತೆ ತಿಳಿಸಲಾಗಿದೆ.

**6.3 Ineligibility Due to Insufficient Attendance**

- A Student who fails to fulfil the minimum attendance requirement, even after the grant of condonation, shall be deemed ineligible to appear for the semester – end examination in the respective course (subject).
- Students declared ineligible under this provision shall be required to repeat the course (subject) in the subsequent semester

**12 Promotion Eligibility Criteria**

12.1 General Eligibility

- A candidate must register their name for the examination for the current semester and fulfil the attendance requirements to be eligible for promotion to the higher semester.

**ಜಾರಿ ವಿಧಾನ :**

- ವಿದ್ಯಾರ್ಥಿಗಳು ಹಾಲಿ ವ್ಯಾಸಂಗ ಮಾಡುತ್ತಿರುವ ಸೆಮಿಸ್ಟರ್‌ನ **ಎಲ್ಲಾ ವಿಷಯಗಳಲ್ಲಿ ನಿಯಮಾನುಸಾರ ಕನಿಷ್ಠ ಹಾಜರಾತಿಯ ಅವಶ್ಯಕತೆಯನ್ನು ಪೂರೈಸಿದಲ್ಲಿ** ಹಾಗೂ ಸೆಮಿಸ್ಟರ್ ಅಂತಿಮ ಪರೀಕ್ಷೆಗಳಿಗೆ ನೋಂದಾಯಿಸಿದ್ದಲ್ಲಿ ತಕ್ಷಣದ ಮುಂದಿನ ಉನ್ನತ ಸೆಮಿಸ್ಟರ್ (Immediate Next Semester) ಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.
- ವಿದ್ಯಾರ್ಥಿಗಳು ಹಾಲಿ ವ್ಯಾಸಂಗ ಮಾಡುತ್ತಿರುವ ಸೆಮಿಸ್ಟರ್‌ನ ವಿಷಯಗಳಲ್ಲಿ Condonation ನೀಡಿದ ನಂತರವೂ ಕನಿಷ್ಠ ಹಾಜರಾತಿಯ ಅವಶ್ಯಕತೆಯನ್ನು ಪೂರೈಸಲು ವಿಫಲರಾದಲ್ಲಿ, ತಕ್ಷಣದ ಮುಂದಿನ ಉನ್ನತ ಸೆಮಿಸ್ಟರ್ (Immediate Next Semester) ಗೆ ಪ್ರವೇಶ ಪಡೆಯಲು ಅನರ್ಹರಾಗಿರುತ್ತಾರೆ.
- ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ಸೆಮಿಸ್ಟರ್ ನ ಹಾಜರಾತಿ ಕೊರತೆ ಇರುವ ವಿಷಯ(course)ಗಳಲ್ಲಿ ಪರೀಕ್ಷೆ(SEE) ಬರೆಯಲು ಅರ್ಹತೆ ಇರುವುದಿಲ್ಲ **ಆದರೆ ಹಾಜರಾತಿ ತೃಪ್ತಿಕರವಾಗಿದ್ದು ಮತ್ತು ನಿಗದಿತ ಆಂತರಿಕ ಅಂಕಗಳನ್ನು ಹೊಂದಿರುವ ವಿಷಯ (course) ಗಳಲ್ಲಿ ಮಾತ್ರ ಪರೀಕ್ಷೆ(SEE) ಗೆ ನೋಂದಾಯಿಸಿ ಬರೆಯಲು ಅರ್ಹನಾಗಿರುತ್ತಾನೆ.**

- ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಸೆಮಿಸ್ಟರ್‌ನ ಯಾವುದೇ ವಿಷಯಗಳಲ್ಲಿ ಹಾಜರಾತಿಯ ಅವಶ್ಯಕತೆಯನ್ನು ಪೂರೈಸಲು ವಿಫಲರಾದಲ್ಲಿ, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಸಂಬಂಧಪಟ್ಟ ಸೆಮಿಸ್ಟರ್‌ಗೆ (Subsequent Academic Year) ಮರು ಪ್ರವೇಶ ಪಡೆದು, ಹಾಜರಾತಿ ಕೊರತೆಯಿರುವ ವಿಷಯದ(course)/ಗಳ ತರಗತಿಗಳಿಗೆ ಮಾತ್ರ ಹಾಜರಾಗಿ, ಕನಿಷ್ಠ ಹಾಜರಾತಿಯ ಅವಶ್ಯಕತೆಯನ್ನು ಪೂರೈಸಿದಲ್ಲಿ, ಸದರಿ ಸೆಮಿಸ್ಟರ್ ಅಂತಿಮ ಪರೀಕ್ಷೆಗಳಿಗೆ (SEE) ನೊಂದಾಯಿಸಿ ಹಾಜರಾಗಲು ಅರ್ಹರಿರುತ್ತಾರೆ.

ಸದರಿ ನಿಯಮಾವಳಿಗಳನ್ನು ಮೇಲೆ ವಿವರಿಸಿರುವಂತೆ ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಅನುಷ್ಠಾನಗೊಳಿಸಲು ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

Digitally signed by
N Manjushree
Date: 04-10-2025
12:32:52

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ: ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರುಗಳಿಗೆ- ಅಗತ್ಯ ಕ್ರಮಕ್ಕಾಗಿ ಹಾಗೂ ತರಗತಿಗಳಲ್ಲಿ ಸುತ್ತೋಲಿಸಲು/ಸೂಚನಾ ಫಲಕಗಳಲ್ಲಿ ಪ್ರಕಟಿಸುವುದು.

ಪ್ರತಿ:1) ಜಂಟಿ ನಿರ್ದೇಶಕರು(ಸಿಡಿಸಿ), ತಾ.ಶಿ.ಇ, ಬೆಂಗಳೂರು.
2) ಸಹಾಯಕ ನಿರ್ದೇಶಕರು (ಎಸಿಎಂ), ತಾ.ಶಿ.ಇ, ಬೆಂಗಳೂರು